ಶ್ರೀ ಕ್ಷೇತ್ರ ಸೊಗಲದಲ್ಲಿ ಶೌಚಾಲಯ ನಿರ್ಮಿಸುವ ಬಗ್ಗೆ.

೧೧೫ ಶ್ರೀ ಶಿವಾನಂದ ಹೆಚ್. ಕಾಡಲಗಿ (ಬೈಲಹೊಂಗಲ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಶ್ರೀ ಕ್ಷೇತ್ರ ಸೊಗಲದಲ್ಲಿ ಪ್ರವಾಸಿಗರ ಅನುಕೂಲತೆಗಾಗಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ದಿನಾಂಕ ೨೫-೩-೧೯೯೯ ರಂದು ಶೌಚಾಲಯವನ್ನು ಕಟ್ಟಲು ಸರ್ಕಾರದ ಆಜ್ಞೆ ಹೊರಡಿಸಲಾಗಿತ್ತೆ?

ಆ) ಈ ಕೆಲಸಕ್ಕೆ ತಾಂತ್ರಿಕ ಮಂಜೂರಾತಿ ಯಾವಾಗ ಕೊಡಲಾಗಿದೆ?

ಇ) ಹಾಗಿದ್ದಲ್ಲಿ ಈ ಕೆಲಸಕ್ಕೆ ಇದುವರೆವಿಗೂ ಆದ ವೆಚ್ಚವೆಷ್ಟು ಮತ್ತು ಈ ಕೆಲಸ ಪ್ರಸ್ತುತ ಯಾವ ಹಂತದಲ್ಲಿದೆ?

ಈ) ಈ ಕೆಲಸ ಮುಗಿಸಲು ಇನ್ನು ಎಷ್ಟು ದಿವಸಗಳು ಬೇಕಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಹೌದು

ಆ) ಇ) ಮತ್ತು ಈ ವಿಷಯದಲ್ಲಿ ಪರಿಪ್ಯ್ತ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸಿಗರಿಗಾಗಿ ಆಕರ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೧೧೦ ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ) ಬೆಳಗಾವಿ ಜಿಲ್ಲೆಯ ಗೋಡಚಿನಮಲ್ಕಿ, ಗೋಕಾಕ್ ಫಾಲ್ಸ್, ಧೂಪದಾಳ ಪಕ್ಷಿಧಾಮ, ಹಿಡಕಲ್ ಡ್ಯಾಂ ಈ ಆಕರ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಕಾರ್ಯಕ್ರಮಗಳೇನು?

ಆ) ಬೆಳಗಾವಿ ಜಿಲ್ಲೆಯ ಹಲಸಿ ಹಂದಿಬಡಗನಾಥ, ಕನಕುಂಬಿ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಮಾಡಲು ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು?

ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನದಲ್ಲಿ ಪ್ರವಾಸೋದ್ಯಮ ಸಂಸ್ಥೆಯಿಂದ ೧೦೦ ಹಾಸಿಗೆಗಳ ವಿಶ್ರಾಂತಿ ಧಾಮವನ್ನು ಕಟ್ಟಲು ಸರ್ಕಾರದ ಕಾರ್ಯಕ್ರಮವೇನಾದರೂ ಇದೆಯೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ಗೋಕಾಕ್ ಫಾಲ್ಸ್ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

ಆ) ಹಲಸಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

ಇ) ಪ್ರವಾಸಿ ಸೌಧದ ಕಾರ್ಯಕ್ರಮ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು:— ಮಂಡಿಸಲಾಯಿತು.

ವರದಿಯನ್ನು ಒಪ್ಪಿಸುವುದು

ಶ್ರೀ ಬಾಬುಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ:—ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಐದನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ ಸಭೆಯು ವರದಿಯನ್ನು ಒಪ್ಪುವುದೆಂದು ಸೂಚಿಸುತ್ತೇನೆ.